ರವಿಕಾಂತಣ್ಣನಿಗೆ ಇದ್ದಕ್ಕಿದ್ದಂತೆ ಹೊಸ ಉಮೇದಿ ಹುಟ್ಟಿ ಅವನ ದಿನಚರಿಯನ್ನೇ ಬದಲಿಸಿತೆಂದರೆ ಅದು ಅಚ್ಚರಿಯ ಮಾತೇ...

## 2

ಕಾಂತಣ್ಣ ಎಂದಿನಂತೆ ಎಂಟು ಗಂಟೆಗೆ ತನ್ನ ಮೊಬೈಲ್ ರಿಪೇರಿ ಅಂಗಡಿಯ ಶಟರ್ ಎಳೆದು, ಕಸದ ತೊಟ್ಟಿಗಿಂತ ಕಡೆಯಾಗಿದ್ದ ತನ್ನ ಅಂಗಡಿಯನ್ನೂ ತನ್ನ ಬದುಕನ್ನೂ ಹೋಲಿಸಿಕೊಂಡು ಎಂದಿನಂತೆ ಖಿನ್ನತೆಯ ಪರಮಾವಧಿಗೆ ಮುಟ್ಟಿ, ತನ್ನ ಪಾಲಿಗೆ ಬಂದ ಬದುಕನ್ನು ಬದುಕಲೇ ಬೇಕು ಎಂಬ ಗಟ್ಟಿ ನಿರ್ಧಾರಕ್ಕೆ ಹೊರಳಿಕೊಂಡಿದ್ದ. ನಿಡುಸುಯ್ಯುವಿಕೆಯಲ್ಲಿ ಎಲ್ಲ ಸಂಕಟಗಳನ್ನೂ ಅದುಮಿಟ್ಟು ಒಂದು 'ಮಧು'ವನ್ನು ಕೆಳದುಟಿ–ಹಲ್ಲುಗಳ ನಡುವೆ ಇಟ್ಟುಕೊಂಡು ಕನ್ನಡಕ ಒರೆಸಿಕೊಂಡು ಹೊಸ ಹಾಡೊಂದನ್ನು ತಾರಕಸ್ಥಾಯಿಗೇರಿಸಿಕೊಂಡ. ಕೆಟ್ಟು ನಾತ ಹೊಡೆಯುತ್ತಿರುವ ಬದುಕು, ಯಾರ ಬದುಕನ್ನೋ ಸಲೀಸು ಮಾಡುವ ಮೊಬೈಲುಗಳನ್ನು ಸರಿ ಮಾಡಿಯಾದರೂ ಸಹ್ಯವಾಗಬಹುದೆಂದು ಕೆಲಸಕ್ಕೆ ಎಂದಿನಂತೆ ಕೈ ಹಾಕಿದ. ನಿಲ್ಲದ ಚಡಪಡಿಕೆಯೊಂದು ಒಮ್ಮೇಲೆ ಎದ್ದು ಅವನನ್ನು ಮೌನಕ್ಕೆ ನೂಕಿತ್ತು. ಅಂಧಕಾರಕ್ಕೆ ಬಿದ್ದ ಬಾಳುವೆಯ ನೆನೆದರೆ ಏನೆಲ್ಲ ಅನಿಷ್ಟ ಯೋಚನೆಗಳು ನುಗ್ಗಿಬರುತ್ತವೆಂದು ತಂಬಾಕಿನ ಚಟವನ್ನು, ಸಂಗೀತದ ಅಮಲನ್ನು ಹೆಚ್ಚಿಸಿಕೊಂಡಿದ್ದ. ಹೋಟೆಲ್ ಊಟ ಇನ್ನಷ್ಟು ನಿಕೃಷ್ಟ ಭಾವವನ್ನೆಬ್ಬಿಸಿದ್ದಕ್ಕೆ ತಾನೇ ಕೈ ಮೈ ಸುಟ್ಟುಕೊಂಡು ಅಡುಗೆ ಮಾಡಿಕೊಳ್ಳತೊಡಗಿದ್ದ. ಹೇಗೋ ಪ್ರಾರಂಭವಾದ ಬದುಕು ಒಮ್ಮೇಲೆ ನಿಂತುಬಿಟ್ಟದ್ದು ಕೆಟ್ಟಕನಸಾಗಲಿ ಎಂಬ ಕನವರಿಕೆಯಲ್ಲಿ ನಿತ್ಯ ಕಣ್ಣು ಬಿಡುತ್ತಿದ್ದವನಿಗೆ ಅದೇ ಅದೇ ಮತ್ತದೇ ಕರಾಳ ನೆನಪು. ಸಾಯಬಾರದು ಎಂಬ ನಿರ್ಧಾರವೊಂದು ಯಾವ ಅರ್ಥ ಬಯಸದೇ ಅವನಲ್ಲಿ ನಿಂತುಬಿಟ್ಟಿತ್ತು. ಬದುಕಲು ಒಂದು ಕಾರಣ, ಆಸರೆ ಬೇಕಿತ್ತು. ಕೆಲಸ ಸಾಧ್ಯವೇ ಆಗದೆ ಮುಂದಿದ್ದ ರಸ್ತೆಯನ್ನು ಅನ್ಯಮನಸ್ಕತೆಯಿಂದ ದಿಟ್ಟಿಸುತ್ತಿರುವಾಗಲೇ ಆಕೆ ಬಂದಿದ್ದಳು.

'ನಾಜೀಮಾ...' ಅನ್ನುವ ಉದ್ಗಾರವೊಂದು ಅವನ ಬಾಯಿಂದ ಅನೈಚ್ಛಿಕವಾಗಿ ಹೊರಬಿತ್ತು. ಅಪರಿಚಿತ ಹುಡುಗಿಯ ಈ ಪರಿಚಿತ ಹೆಸರಿಗೆ ತಟಕ್ಕನೆ ಸ್ಪಂದಿಸಿತು. ಆ ಹೆಸರು, ಆ ದೇಹ, ಆ ಯೌವನ, ಆ ಸೌಂದರ್ಯ... ಎಂದೂ ಮಾಸದ, ನೆನೆಸಿದಷ್ಟೂ ಸುಖ ಕೊಡುವಂಥವು. ರಿಪೇರಿಗೆಂದು ಕೈಗೆತ್ತಿಕೊಂಡಿದ್ದ ಐಫೋನಿಗಿಂತ ಹೈಸ್ಪೀಡಿನಲ್ಲಿ ಇಪ್ಪತ್ತು ವರ್ಷಗಳ ಅಷ್ಟೂ ಭಾವಕೋಶದ ಸಿಕ್ಕಾಪಟ್ಟೆ ಗಿಗಾಬೈಟಿನ ಫೈಲು ಡೌನ್‌ಲೋಡ್ ಆಗಿಬಿಟ್ಟಿತ್ತು. 'ನೋಡಮ್ಮ ಈಗಷ್ಟೆ ಕೈಗೆ ತಗೊಂಡಿದ್ದೀನಿ... ನಾಳೆ ಸಂಜೆ ಬಂದ್ಬಿಡು. ಇವು ಕಾಸ್ಲಿ ಐಟಮ್ಸು... ಹಂಗೆಲ್ಲ ಅವಸರದಾಗೆ ಕೈಹಾಕ್ಬಾರ್ದು... ಅಲ್ವಾ?' ಅಂದು ಆ ಹುಡುಗಿಯ ಸಾಗ ಹಾಕಿದ್ದ. ನೀರಸ ಬದುಕಿನಲ್ಲಿ ಎಂಥದ್ದೋ ಸುಖಕರ ನೋವೊಂದು ಹೆಡೆಯಾಡತೊಡಗಿತ್ತು. ಏನೋ ಸುಖ, ಬಚ್ಚಿಟ್ಟು ಮರೆತ ದುಡ್ಡಿನಂತೆ ನೆನಪಾಯಿತವನಿಗೆ. ದುರ್ಗದ ಬಡವರೇ ಹೆಚ್ಚಾಗಿದ್ದ ಪುಟ್ಟಕೇರಿಯೊಂದರಲ್ಲಿ ಬಾಲ್ಯ ಕಳೆದಿದ್ದ ಕಾಂತಣ್ಣನ ಮೊಟ್ಟಮೊದಲ ಮೊಡವೆಗೆ, ಮೊದಲ ಸ್ವಪ್ನ ಸ್ಖಲನಕ್ಕೆ, ಮೊದಲ ಪೌರುಷದ ಹಾರ್ಮೋನಿನ ಸ್ರವಿಕೆಗೆ ಆಕೆಯೇ ಕಾರಣಳಾಗಿದ್ದಳು. ಹೊಳೆವ ಬಣ್ಣ, ದೊಡ್ಡ ಆಕರ್ಷಕ ಕಣ್ಣುಗಳು, ಚುರುಕು ಮೂಗಿನ ಹೊರಳೆಗಳು, ಬಳುಕುವ ತೆಳುದೇಹ, ಉಬ್ಬಿ ಅರಳಿ ಕೆರಳಿಸುವಂತೆ ಜೀಕುವ ವಕ್ಷಸ್ಥಲ, ಭುಜದ ಮೇಲೆ ವಯ್ಯಾರದಿಂದ ಹರಡಿ ಕಾಡುವ ದಟ್ಟಹೆರಳು, ಬಳಸುಳಿದರೆ ಹಿಡಿದೇಬಿಡಬೇಕೆನಿಸುವ ಸಣ್ಣನಡು, ಸದಾ ಒದ್ದೆಯಾದ ತೆಳುತುಟಿಗಳು... ಯಾವ ಚಿತ್ರಕಾರನೂ ತಲೆಕೆಡಿಸಿಕೊಂಡಿರದಷ್ಟು ರೀತಿಯಲ್ಲಿ ನೋಡಿ–ಕಲ್ಪಿಸಿ–ಹಗಲುಗನಸಿನಲ್ಲಿ ಸ್ಪರ್ಶಿಸಿ ಸಿಹಿನರಕ ಅನುಭವಿಸಿದ್ದ. ವಯಸ್ಸಿಗೆ ತಕ್ಕುನಾಗಿ ನರನಾಡಿಗಳಲ್ಲಿ ಸುರುವಿಟ್ಟುಕೊಂಡ ಹಾರ್ಮೋನುಗಳು ಇನ್ನಷ್ಟು ಕುಮ್ಮಕ್ಕು ಕೊಟ್ಟಂತೆ ಅವಳ ನೋಡಿಯೇ ನೋಡಿದ. ಭ್ರಮೆ–ವಿಭ್ರಮೆಗಳಲ್ಲಿ ಆಲಂಗಿಸಿದ, ಆವರಿಸಿದ, ಅನುಭವಿಸಿದ.